ಅಂಗಡಿಗಳ ಜೊತೆ ಒಂದು ನಾಟಕ. ಅಣಶಿ ಶಾಲೆಯ ಮಾಸ್ತರಕಿ ಮಾಡಿದ ನಂತರವೆ ನನಗೆ ಈ ವಿಷ್ಯ ಗೊತ್ತಾದದ್ದು ಮತ್ತು ನೋಡಿದ್ದು.

ಅಣಶಿಗೆ ವರ್ಗವಾಗಿ ಬಂದು ಆಗಷ್ಟೇ ಒಂದು ತಿಂಗಳಾಗಿತ್ತು. ಬಹಳಷ್ಟು ಸೋಜಿಗದ ವಿಷಯ ತಿಳಿದುಬಂತು. ಮಕ್ಕಳ ತಂದೆ ತಾಯಿಯರು ಅನಕ್ಷರಸ್ಥರಾಗಿದ್ದ ಊರು ಅದು. ಇಲ್ಲಿನ ಜನರಿಗೆ ಕನ್ನಡ ಬರುತ್ತಿರಲಿಲ್ಲ. ಮನೆಯಿಂದಲೇ ನೇರವಾಗಿ ಒಂದನೇ ವರ್ಗಕ್ಕೆ ಪ್ರಮೋಶನ್ ಪಡೆದ ಮಕ್ಕಳ ಹತ್ತಿರ ಹೋಗಲು ನಾನು ಕೊಂಕಣಿ ಭಾಷೆ ಕಲಿಯಬೇಕಾಗಿತ್ತು. ಮೊದಮೊದಲು ನನಗೂ ಕೊಂಕಣಿ ಬರುತ್ತದೆ ಎಂದು ಮಕ್ಕಳ ಎದುರು ನಾನು ನಾಟಕ ಶುರು ಮಾಡಿದ್ದು ಶಾಲೆಯಿಂದ. ನಮ್ಮೂರು ಅಂಕೋಲೆ. ಅಲ್ಲಿ ಹತ್ತಾರು ನಮೂನೆಯಲ್ಲಿ ಕನ್ನಡವನ್ನು ಬಗೆ ಬಗೆಯಾಗಿ ಮಾತಾಡುವ, ಪ್ರಾದೇಶಿಕವಾಗಿ ಭಿನ್ನವಾದ ಸಮೃದ್ಧ ಭಾಷೆಯ ಜನ ಇದ್ದಾರೆ. ಹೀಗಾಗಿ ಕಾಲೇಜು ವೃತ್ತಿ ಶಿಕ್ಷಣ ಮುಗಿಯುವವರೆಗೂ ಕನ್ನಡದಲ್ಲೆ ಮಿಂದೆದ್ದ ಜೀವ ನನ್ನದು. ಏಕದಂ ಅಣಶಿಗೆ ನೌಕರಿ ನಿಮಿತ್ತ ಬರುವ ಅನಿವಾರ್ಯತೆ. ಕಾಡಲ್ಲಿ ಹೇಗೆ ಇರುವುದು ಎಂದು ಅಂದುಕೊಂಡು ಬಂದರೂ ಹೊಟ್ಟೆಪಾಡು ಇರುವಂತೆ ಮಾಡಿತು. ಹೈಸ್ಕೂಲಿಗೆ ಹೋಗುವಾಗ ಸೊನಗಾರ ಹುಡುಗಿ ಮೀರಾ ನನ್ನ ಗೆಳತಿಯಾಗಿದ್ದಕ್ಕೆ ಅವರ ಕೊಂಕಣಿಯ ಚೂರು ಪದಗಳು ನನ್ನ ಮನದಲ್ಲಿ ಸುಮ್ಮನೆ ಕುಳಿತಿದ್ದವು. ಅಣಶಿಗೆ ಬಂದ ನಂತರ ಆ ಬಿಡಿ ಬಿಡಿ ಪದಗಳನ್ನು ಮಕ್ಕಳ ಬಳಿ ಹೇಳಿ, ಕೊಂಕಣಿಯ ಚೂರು ಪದಗಳು ನನ್ನ ಮನದಲ್ಲಿ ಇದ್ದವಾದರೂ, ಅವು ಶಬ್ದ ರೂಪ ತಾಳಿರಲಿಲ್ಲ. ಅಣಶಿಗೆ ಬಂದ ನಂತರ ಆ ಬಿಡಿ ಬಿಡಿ ಪದಗಳನ್ನು ಮಕ್ಕಳ ಬಳಿ ಹೇಳಿ, ನನಗೂ ಕೊಂಕಣಿ ಬರುತ್ತದೆ ಎಂಬ ಸುಳ್ಳು ನಾಟಕ ಶುರುವಾಯಿತು. 'ನಲಿಕಲಿ' ಮಕ್ಕಳಾಗಿದ್ದಕ್ಕೆ ಎಲ್ಲ ನಂಬಿದರು, ಆ ಮಾತು ಬಿಡಿ. ದೊಡ್ಡ ವರ್ಗದ ಮಕ್ಕಳ ಹತ್ರ ಚೂರು ಪಾರು ಕೊಂಕಣಿ ಶಬ್ದ ಕೇಳಿ, ಕನ್ನಡದಲ್ಲಿ ಬರೆದಿಟ್ಟುಕೊಂಡೆ. ಅದನ್ನು 'ನಲಿಕಲಿ' ಮಕ್ಕಳ ಮುಂದೆ ನಾಟಕ ರೂಪೇನ ಹೇಳಿ ಕೊಂಕಣಿ ಬರುವ ನಾಟಕ ಮಾಡಿ, ಕೊನೆಗೆ ನಾಟಕವೇ ಸತ್ಯವಾಗಿ ನಾನೂ ಕೊಂಕಣಿ ಕಲಿತು, ಮಕ್ಕಳ ವಿಶ್ವಾಸ ಗಳಿಸಿ, ಕೊಂಕಣಿ ಮೂಲಕ ಕನ್ನಡ ಭಾಷೆಯನ್ನು ಮಕ್ಕಳು ಚಂದವಾಗಿ ಕಲಿಯುವ ಹಾಗಾಯಿತು.

ನನಗೆ ಗೊತ್ತಿರುವ ಹಾಗೆ ಅಣಶೀಲಿ ಕನ್ನಡಾಭಿಮಾನ ಮೆರೆಯುವ ಜನರಿದ್ದಾರೆ. ನಾನು ಈ ಊರಿಗೆ ವರ್ಗವಾಗಿ ಬರುವ ಪೂರ್ವದ ಮೂವತ್ತು ನಲವತ್ತು ವರ್ಷಗಳ ಹಿಂದಿನಿಂದಲೇ ಯುಗಾದಿ ಸಮೀಪ ಇರುವಾಗ ಊರವರೆಲ್ಲ ಸೇರಿ ಒಂದು ಕನ್ನಡ ನಾಟಕ ಆಡಿಸುತ್ತಿದ್ದರಂತೆ. ಈ ನನ್ನ ಅಣಶಿ ಇರುವುದು ಜೋಯಿಡಾ ತಾಲೂಕಿನಲ್ಲಿ. ಈ ತಾಲೂಕಿನಲ್ಲಿ ಒಂದು ಸಿನಿಮಾ ಥಿಯೇಟರ್ ಇಲ್ಲ. ಇಂದಿಗೂ ಮಕ್ಕಳಿಗೆ ಥಿಯೇಟರ್ ಎಂದರೆ ಹೀಗೇ ಇರುತ್ತದೆ ಎಂಬ ಕಲ್ಪನೆಯಿಲ್ಲ. ಆದರೆ ನಾಟಕದ ಅಭಿರುಚಿ ಮಾತ್ರ ಇಡೀ ಜೋಯಿಡಾ ತಾಲ್ಲೂಕಿನ ಹಳ್ಳಿ ಹಳ್ಳಿಯ ಜನರಲ್ಲಿ ಇದೆ.

ಕೊಂಕಣಿ ಮಾತಾಡುವ ಜನರಿದ್ದರೂ ಅಣಶಿಯಲ್ಲಿ ಕನ್ನಡ ನಾಟಕ ನಡೆಯುತ್ತದೆ. ಕೊಂಕಣಿ ಮಾತಾಡುವ ಅಣಶಿ ಆವರಣದಲ್ಲಿ ಕನ್ನಡ ಎಂಬುದು ಸಂವೇದನೆಯ ಅಂಶವಾಗಿಯೇ ಉಳಿದಿದೆ ಎಂಬುದನ್ನು ಕಣ್ಣಾರೆ ನೋಡುವ ಪ್ರಸಂಗ ಒಮ್ಮೆ ಒದಗಿ ಬಂತು. ಊರಿನ ಸಿದ್ದೇಶ್ವರ ದೇಗುಲದ ಪಕ್ಕ ಒಂದು ಸಂಜೆ, ಕೈಕಾಲು ನಡುಗುವಷ್ಟು ಚಳಿಯಿರುವ ಹೊತ್ತಲ್ಲಿ ಊರಿನವರ ಮೀಟಿಂಗ್ ಆಗುತ್ತದೆ. ಚಳಿಗಾಲದಲ್ಲಿ ಕಣಿವೆಯ ತುಂಬ ಕಾರಿನ ಹಾರ್ನ್ ಹಾಕಿದಂತೆ ಕೂಗುವ, ಹೆಸರು ಗೊತ್ತಿಲ್ಲದ ಹಕ್ಕಿಗಳದ್ದೆ ಅಬ್ಬರ. ಊರ ಪ್ರಮುಖ ಬುಧವಂತ, ಮಿರಾಶಿ ಮುಂದಾಳತ್ವದಲ್ಲಿ ಹಿರಿಕಿರಿಯರೆಲ್ಲ ಸೇರಿ ಪೂಜೆ ಸಲ್ಲಿಸಿ ದೇವರಲ್ಲಿ ಮಾಂಗಣೆ ಮಾಡಿಕೊಂಡು ಈ ವರ್ಷ ಮಾಡುವ ನಾಟಕದ ಕುರಿತು ಯೋಜನೆ ರೂಪಗೊಳ್ಳುತ್ತದೆ. 'ಈ ಸಲವು ಸಣ್ಣ ಪಾತ್ರ ನಂಗೊಂದು ಕೊಡಿ' ಎಂದು ಅಣಶಿಯ ಅಜ್ಜ ಪಾಂಡುರಂಗ ರಾವೂತ ಹೇಳುತ್ತಿದ್ದ ಹಾಗೆ ನೆರೆದವರ ಬಾಯಿ ಮುಚ್ಚಿತು. 'ಕೂಬ್ ತಂಡ್ ಆಸಾ. ತೂ ಕಿತಾಕ್ ಎವೂನ್ ತ್ರಾಸ್ ಗೆತ್ಲೆ' ಎಂದು ಒಂದು ನಮೂನಿಯಲ್ಲಿ ನೀ ಬರುವುದೇ ಬೇಡವಾಗಿತ್ತು ಎಂಬ ಧಾಟಿಯಲ್ಲಿ ರಾಮಾ ಕಾಜುಗಾರ ಕೇಳಿದ ಕೂಡಲೆ ಅಜ್ಜನಿಗೆ ಸಿಟ್ಟು ಬಂತು. ಏನೇನೋ ಸಂಗತಿಗಳನ್ನು ಉದುರಲು ಶುರು ಮಾಡಿಯೇ ಬಿಟ್ಟ. ಮಿರಾಶಿ ಮಾಮಾ ನಡುವೆ ಮಾತಾಡದಿದ್ದರೆ ಒಂದು ಜಗಳವೇ ಆಗಿ ಬಿಡುತ್ತಿತ್ತು. ಪಾಂಡುರಂಗ ರಾವೂತಗೆ ಅಜುಮಾಸು ಅವರಿವರ ಲೆಕ್ಕದಂತೆ ನೋಡಿದರೆ ಈಗ ಬರೊಬ್ಬರಿ ತೊಂಬತ್ನಾಲ್ಕು. ಬಾರೀಕು ಕಡ್ಡಿಯಂತಹ ಜೀವ. ಆಗಿನ ಕಾಲಕ್ಕೆ ಅಣಶಿಯಲ್ಲಿ ಪ್ರೌಢಶಾಲೆ ಇರಲಿಲ್ಲ. ಹೀಗಾಗಿ ಜೋಯಿಡಾಕ್ಕೆ ಹೋಗಿ ಎಸ್.ಎಸ್.ಎಲ್.ಸಿ. ಕಲಿತಿದ್ದರು. ಶಿಫಾರಸು ಇಲ್ಲದೆ ಸೈನಿಕ ಆಗಿ ನಿವೃತ್ತಿ ಆದವ ಈ ಪಾಂಡುರಂಗ ರಾವೂತ. ಈ ಅಜ್ಜ ಅಣಶಿಯಿಂದ ಮೂವತ್ತು ಕಿ.ಮೀ. ಇರುವ ಜೋಯಿಡಾದಲ್ಲಿ ಶಾಲೆ ಕಲಿಯುವಾಗ ನಾಟಕ ನೋಡಿ ಪ್ರಭಾವಿತರಾಗಿ, ತಮ್ಮೂರಲ್ಲೂ ನಾಟಕ ಆದರೆ ಚನ್ನಾಗಿರುತ್ತಿತ್ತು ಎಂದು ಯೋಚಿಸಿದ್ದರು. ಶಾಲೆ ಕಲಿಯದೆ ಜೀವನ ಪಾಠವನ್ನು ಕಲಿತ ಮಂದಿನೆಲ್ಲ ಸೇರಿಸಿ ನಾಟಕ ಮೊದಲು ಶುರು ಮಾಡಿದ್ದವರು ಪಾಂಡುರಂಗ ಅಜ್ಜ. ಆದರೆ ಕನ್ನಡ ಮಾತಾಡುಕೆ ಕಷ್ಟ ಪಡುವ, ಕನ್ನಡ ನಾಟ್ಕ ಆದ್ರೂ ಕೊಂಕಣಿ ಪದಗಳನ್ನೇ ನಾಟಕದುದ್ದಕ್ಕೂ ಹೆಚ್ಚು ಬಳಸುವ ಅವರಿಂದ ನಾಟ್ಕ ಚಲೋ ಆಗುವುದಿಲ್ಲ ಎಂದು, ಕಡೆಗೆ ಊರವರ ಸಹಾಯ ಪಡೆದು ಧಾರವಾಡ ಕಡೆಗಿಂದ ನಾಟ್ಕದ ಕಂಪನಿ ಊರಿಗೆ ಬರುವಷ್ಟರಲ್ಲಿ ಇಂವ ಸೈನ್ನ ಸೇರಿ ಆಗಿತ್ತು. ರೇಷನ್ ಅಂಗ್ಡಿ ನಂಬಿಕೊಂಡು, ವರ್ಷಕ್ಕೆ ಮೂರು ತಿಂಗಳು ಗೋವೆ ಬದಿಗೆ ಹೋಗಿ ದುಡಿದು ತಂದು, ಆ ದುಡ್ಡಲ್ಲಿ ವರ್ಷವಿಡಿ ಕಳೆಯುತ್ತ, ಕಾಡಿನ ಗಡ್ಡೆ ಗೆಣಸು, ಬಿದ್ದ ಹಣ್ಣು ತಿಂದು ಬದುಕುತ್ತಿರುವ ಇಲ್ಲಿನ ಜನರಿಗೆ ನಾಟಕದ ದುಡ್ಡು ಹೊಂದಿಸುವುದು ಕನಸಿನ ಮಾತು. ಈ ಅಜ್ಜ ಸೈನಿಕ ಆದ ನಂತ್ರ ತೊಂದರೆ ಇಲ್ಲದೆ ಇಷ್ಟು ವರ್ಷದವರೆಗೂ ನಾಟಕ ಊರಲ್ಲಿ ನಡೆದದ್ದು ಇತಿಹಾಸ. ಕೊನೆ ಕೊನೆಗೆ ಕನ್ನಡ ಕಲಿತವರು ತಾವೂ ಕಂಪನಿಯವರ ಜೊತೆ ಸೇರಿ ಸಣ್ಣ ಪುಟ್ಟ ಪಾತ್ರ ಮಾಡುತ್ತ, ಅರ್ಧಮರ್ಧ ಕನ್ನಡ ಮಾತಾಡಿ ಊರವರ ಪ್ರಶಂಸೆಗೆ ಪ್ರಾಪ್ತರಾದರೆ ಅಂವ ಆ ವರ್ಷದ ಹೀರೊ. ಹೀಗೆಲ್ಲ ನಡೆಯುವಾಗ ಅಜ್ಜ ನಾಟ್ಕದ ಹೊತ್ತಲ್ಲಿ ರಜೆ ಹಾಕಿ ಊರಿಗೆ ಬಂದು ಹೀರೋ ಅಥವಾ ವಿಲನ್ ಪಾತ್ರ ಮಾಡೋದು ರೂಢಿ. ವಯಸ್ಸಾದ ನಂತರ ಮರೆವಿನ ಕಾರಣದಿಂದ ಸಣ್ಣಪುಟ್ಟ ಪಾತ್ರ ಮಾಡುವುದು ನಡೆಯಿತು. ನಂತರದಲ್ಲಿ ದುಡ್ಡೆಲ್ಲ ಕೊಡುತ್ತಾನೆಂದು, ನಾಟಕಕ್ಕೆ ಹುಬ್ಬಳ್ಳಿಯಿಂದ ಬರುವ ನಟಿಯರಿಗೆ ಉಳಿಯಲು ತನ್ನ ಮನೆ ಬಿಟ್ಟುಕೊಟ್ಟು ಅವರ ದೇಖರೇಖಿ ನೋಡುತ್ತಾನೆಂದು ಅಜ್ಜನಿಗೆ ಸಣ್ಣಪುಟ್ಟ ಪಾತ್ರ ಕೊಡುವ ಸಂಪ್ರದಾಯ ನಡೆದುಕೊಂಡು ಬಂದಿದೆ. ಈ ಸಲವೂ ಅಜ್ಜ ತಾಲೀಮಿಗಾಗಿ ಬೆಳಿಗ್ಗೆದ್ದು, ಚಳಿ ತಡೆಯಲು ಒಂದು ಬಿಳಿಯ ಶಾಲನ್ನು ಹೊದ್ದು ಕರೆಕ್ಟ ಟೈಮಿಗೆ ಹಾಜರಾಗುತ್ತಿದ್ದ. ಅಜ್ಜನ ಈ ಉಮೇದಿ ಉಳಿದವರ ತಾಲೀಮಿಗೆ ಸಾಥ್ ಕೊಟ್ಟಿತ್ತು. ಈ ಅಣಶಿ ಕಡೆಗೆ ನಾಟ್ಕ ಆದ್ರೆ ಸುತ್ತ ಹತ್ತೂರಿನವರಿಗೂ ಖಬರು ಸಿಗುತ್ತದೆ. ಇಲ್ಲಿನ ನಾಟಕಗಳಲ್ಲಿ ಕನ್ನಡ ಹಾಗೂ ಕೊಂಕಣಿ ಎರಡೂ ಸತ್ವಗಳು ಎರಕಗೊಂಡು ಮೈ ನವಿರೇಳಿಸುತ್ತವೆ. ನಾಟಕ ನೋಡಲು ಎಂಟು ಹತ್ತು ಕಿ. ಮೀ ನಡೆದು ಬರುವ ಪಾವ್ಣೆಯರಿಗೆ ಊರವರು ಸೇರಿ ಊಟ ರೆಡಿ ಮಾಡುತ್ತಾರೆ. ಎಲ್ಲರ ಮನೆಯ ಅಕ್ಕಿ, ಬೇಳೆ, ತರಕಾರಿ, ಅವರೇ ಬೆಳೆದ ಗಡ್ಡೆ ಗೆಣಸು, ಕೆಲವು ಕಾಡಿನಲ್ಲಿ ಸಿಕ್ಕ ತಿನ್ನುವ ಗಡ್ಡೆಗಳು..ಎಲ್ಲ ಸಾಮಾನುಗಳು ಖುಷಿಯಿಂದ ಬಂದು ದೇಗುಲದ ಪಕ್ಕ ಕುಳ್ಳುತ್ತವೆ. ಎರಡು ಮೂರು ದಿನದ ಹಿಂದಿನಿಂದಲೂ ಕಾಜುವಾಡಾದ ಅಡುಗೆಬಾಯಿ ಸವಿತಾಳ ಮುಂದಾಳತ್ವದಲ್ಲಿ ದೇವಸ್ಥಾನದ ದೊಡ್ಡ ದೊಡ್ಡ ಪಾತ್ರೆಗಳೆಲ್ಲ ತಮ್ಮ ಮೈ ತೊಳೆದುಕೊಂಡು ಅಡುಗೆ ಮಾಡಲು ಸಿದ್ಧವಾಗಿ ನಿಂತಿವೆ. ಎಲ್ಲರ ಮನೆಯ ಎಲ್ಲ ಪದಾರ್ಥಗಳು ಬಂದು ಅಡುಗೆ ರುಚಿ ಹೆಚ್ಚಿಸಿವೆ. ಸಂಜೆ ಏಳು ಗಂಟೆಯಿಂದ ರಾತ್ರಿ ಹತ್ತರವರೆಗೂ ಬಂದವರಿಗೆ ಊರವರು ಊಟ ಹಾಕುತ್ತಾರೆ. ದೂರ ದೂರದವರೆಗೂ ನಡೆದು ಬರುವುದರಿಂದ ಹಸಿದ ಹೊಟ್ಟೆಯ ತಳಮಳವೂ ಇವರಿಗೆ ಗೊತ್ತಿದೆ. ಎಲ್ಲರ ಹೊಟ್ಟೆ ತುಂಬಿದ

**ಐ ಸಿ ಯು**

ಅಕ್ರಮ ಸಂಪಾದನೆ
ಮಾಡುವ ಎಲ್ಲರ ಮನದಲ್ಲಿನ
ಧೈರ್ಯದ ರೂಪದ ಪ್ರಶ್ನೆ–
'ನಮ್ಮನ್ನು ಗಮನಿಸಲು
ದೇವರಿಗೆಲ್ಲಿದೆ ಸಮಯ?'

ಈ ಪ್ರಶ್ನೆಗೆ ಉತ್ತರ
ಜೀವನದ ಕೊನೆಗಾಲದಲ್ಲಿ,
ಆಸ್ಪತ್ರೆಯಲ್ಲಿನ ಬರಹ:
ಐ ಸಿ ಯು

**–ಗಂಜಾಂ ನಾಗರಾಜ್**